ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು, ಯಾವ ಮಂತ್ರಿಗಳು ಸದನದಲ್ಲಿ ಇರುವುದಿಲ್ಲವೇ, ಅವರ ಹೆಸರಿನ ಮುಂದಿರುವ ಹಾಗದ ಪತ್ರಗಳನ್ನು ಮಂಡಿಸುವುದು ಬೇಡವೆಂದು ಹೇಳಿದ್ದರು, ತಾವು ಒಪ್ಪಿದ್ದಿರಿ. ಮಂತ್ರಿಗಳಿಲ್ಲವೆಂದು, ಒಬ್ಬರೇ ಎಲ್ಲವನ್ನೂ ಮಂಡಿಸಿದರೆ ಹೇಗೆ?

ಅಧ್ಯಕ್ಷರು :— ನಾವು ಸದನವನ್ನು 10 ಗಂಟೆಗೆ ಕರೆದಿದ್ದು, 10.30 ಗಂಟೆಯಾದರೂ ಬಂದಿದ್ದರೆ ಹೇಗೆ? ಇನ್ನು ಮುಂದೆ ಸರಿಯಾಗಿರಲು ಹೇಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಆಗಬಹುದು.

ಶ್ರೀ ಎಸ್.ಎಸ್. ಪಾಟೀಲ್ :— ಮುಂದಿನ ಸಾಲಿನಲ್ಲಿ ಒಬ್ಬರೂ ಇಲ್ಲ.

Mr. Speaker :— Please see, it should not happen in future.

3. ಶಾಸನ ರಚನೆ

(ಎ) ವಿಧೇಯಕ ಮಂಡನೆ

(i) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ 2000 (ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಸಿ.ಆರ್. ಸಗೀರ್ ಅಹಮದ್ :— (ಸಾರಿಗೆ ಸಚಿವರು) ಮಾನ್ಯ ಅಧ್ಯಕ್ಷರೆ, 2000ನೇ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

"2000ನೇ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :— ಮಾನ್ಯ ಅಧ್ಯಕ್ಷರೆ, 2000ನೇ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ I